ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ: DEPARTMENT / SUBJECT: ಕರ್ನಾಟಕ ವಿಧಾನ ಸಭೆ ಸಚಿವಾಲಯ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ    ದಿನಾಂಕ : DATE : 11/09/2019

ಸ್ಟೇಟ್ ನ್ಯೂಸ್

## ಖಜಾನೆ ಮೂಲಕ ಶಾಸಕರ ವೇತನ: ವಿಧಾನಸಭೆ ಕಾರ್ಯದರ್ಶಿ

**ಬೆಂಗಳೂರು:** ಶಾಸಕರ ವೇತನ ಹಾಗೂ ಭತ್ಯೆಗಳ ಪಾವತಿಯನ್ನು ಇನ್ನುಮುಂದೆ ಖಜಾನೆ -2 ಮೂಲಕ ಮಾತ್ರ ನಿರ್ವಹಣೆ ಮಾಡುವಂತೆ ಹಣಕಾಸು ಇಲಾಖೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಈವರೆಗೆ ಶಾಸಕರ ವೇತನ ಹಾಗೂ ಇತರೆ ಭತ್ಯೆಗಳನ್ನು ವಿಧಾನಸಭೆ ಸಚಿವಾಲಯದ ಮೂಲಕ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗುತ್ತಿತ್ತು. ಈ ವ್ಯವಸ್ಥೆಯನ್ನು ತಕ್ಷಣದಿಂದ ರದ್ದುಪಡಿಸಿ ಖಜಾನೆ -2 ಮೂಲಕ ಪಾವತಿ ವ್ಯವಸ್ಥೆ ನಿರ್ವಹಿಸಲು ಸೂಚಿಸಲಾಗಿದೆ. ಹಣಕಾಸು ಇಲಾಖೆ ಸೂಚನೆ ಹಿನ್ನೆಲೆಯಲ್ಲಿ ವಿಧಾನಸಭೆ ಸಚಿವಾಲಯು ಎಲ್ಲ ಶಾಸಕರಿಗೆ ಸೂಚನೆ ರವಾನಿಸಿದ್ದು, ಬ್ಯಾಂಕ್ ಖಾತೆ, ಪ್ಯಾನ್ ನಂಬರ್, ಆಧಾರ್ ಸಂಖ್ಯೆ ಹಾಗೂ ಇತರ ದಾಖಲೆ, ಮಾಹಿತಿಯನ್ನು ಈ ತಿಂಗಳ 15ರೊಳಗೆ ಸಲ್ಲಿಸಲು ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರು ಸೂಚಿಸಿದ್ದಾರೆ.